ಹಕ್ಕನ್ನು ಗಮನಿಸಬೇಕು, ನಮಗೆ ರಕ್ಷಣೆ ಕೊಡುವ ದೃಷ್ಟಿಯಿಂದ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು.—ರಕ್ಷಣೆ ಕೊಡುವುದಕ್ಕೆ ಅವಕಾಶ ಕೊಡಿ ಎಂದು ನಾನು ಕೇಳುವುದು. ಒಟ್ಟು ಸದಸ್ಯರ ಹಕ್ಕನ್ನು ಮೊಟಕು ಮಾಡದೆ ತಮ್ಮ ತಮ್ಮ ಜಾಗಕ್ಕೆ ಹೋಗಿ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಕೆಲವು ಜನ ಮಾನ್ಯ ಸದಸ್ಯರಿಗೆ ಗೊತ್ತಿಲ್ಲದಿರಬಹುದು. ಹಿಂದೆ ಕೂಡ ಧರಣಿ ಸತ್ಯಾಗ್ರಹ ನಡೆದ ಕಾಲದಲ್ಲಿ ಪ್ರಶ್ನೋತ್ತರ ಕಾಲ ಎರಡು ಮೂರು ದಿನ ಮುಂದೂಡಿರತಕ್ಕದ್ದು ಇದೆ. ಮಾನ್ಯ ವಿರೇಂದ್ರಪಾಟೀಲರ ಸರ್ಕಾರ ಇದ್ದಾಗ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಆರ್ಥ ಸಚಿವರಾಗಿದ್ದರು.

ಶ್ರೀ ಪಿ. ರಾಮದೇವ್.—ಹಿಂದೆ ಆಗಿರುವುದನ್ನು ಈಗ ನಾವು ಮಾಡಬೇಕೆಂದು ಇದೆಯೇ ?

ಶ್ರೀ ಎಸ್. ಬಂಗಾರಪ್ಪ.—೬೨ನೇ ಇಸವಿಯಲ್ಲಿ ಮಾನ್ಯ ಬೊಮ್ಮಾಯಿಯವರೂ ಕೂಡ ಧರಣಿ ಕುಳಿತಿದ್ದ ನೆನಪು. ಮೂರು ದಿವಸಗಳ ಕಾಲ ಪ್ರಶ್ನೋತ್ತರ ಇಲ್ಲದೇ ಸಭೆ ನಡೆಯಿತು. ಈಗ ಅವರು ಸಚಿವರಾಗಿದ್ದಾರೆ. ಆದ್ದರಿಂದ ದಯವಾಡಿ ಮಾನ್ಯ ಸಭಾಧ್ಯಕ್ಷರು ಸರ್ಕಾರಕ್ಕೆ ಆದೇಶವನ್ನು ಕೊಡಬೇಕು. ಅವರು ನ್ಯಾಯಾಂಗ ತನಿಖೆಗೆ ತಯಾರಿದ್ದೇವೆ ಎಂದು ಪ್ರಕಟಮಾಡಲಿ ಸದನವನ್ನು ತಪ್ಪು ದಾರಿಗೆ ಎಳೆಯತಕ್ಕಂಥ ಕೆಲಸ ಬೇಡ.

ಶ್ರೀ ಪಿ. ರಾಮದೇವ್.—ದಯವಾಡಿ ಒಂದು ಗಂಟೆಯ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಇದನ್ನು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಅಧ್ಯಕ್ಷರು.—ಈಗ ಮೊದಲಿಗೆ ಪ್ರಶ್ನೋತ್ತರಗಳನ್ನು ತೆಗೆದುಕೊಳ್ಳುತ್ತೇನೆ. ತಾವು ಸಹಕರಿಸಬೇಕು.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ತಾವು ಈ ಒಂದು ನಿಲುವನ್ನು ತೆಗೆದು ಕೊಂಡಿರುವುದರಿಂದ ಮತ್ತು ಸರ್ಕಾರವು ಕೂಡಾ ತನ್ನ ಹಠಮಾರಿತನವನ್ನು ಮುಂದುವರಿಸಿರುವುದರಿಂದ ನಾವು ಈ ಸಭೆಯ ಮಾನ್ಯ ಸದಸ್ಯರ ಹಕ್ಕುಗಳನ್ನು ಗಮನದಲ್ಲಿಟ್ಟುಕೊಂಡು ನಾವುಗಳು ಸಭಾತ್ಯಾಗ ಮಾಡಬೇಕೆಂದಿದ್ದೇವೆ. ನಮ್ಮ ಪಾಪ ಇಷ್ಟು ಮಾತ್ರ ಇದೆ. ಏನೆಂದರೆ ಈ ಸರ್ಕಾರದವರು ಈ ಒಂದು ಒಳಸಂಚಿನಲ್ಲಿ ಪಾಲುದಾರರಾಗಿರುವುದರಿಂದ ಈ ವಿಚಾರದಲ್ಲಿ ನ್ಯಾಯಾಂಗ ತನಿಖೆ ಆಗಬೇಕೆಂದು ನಾವು ಒತ್ತಾಯ ಮಾಡುತ್ತಿದ್ದೇವೆ. ಆದರೆ ಇದಕ್ಕೆ ಸರ್ಕಾರದವರು ಒಪ್ಪುತ್ತಿಲ್ಲ. ಈ ಸರ್ಕಾರದ ಈ ಧೋರಣೆಯ ವಿರುದ್ಧ ನಾವು ಸಭಾತ್ಯಾಗ ಮಾಡುತ್ತೇವೆ. ಆದರೆ ನಮ್ಮ ಧೋರಣೆಯನ್ನು ಮಾತ್ರ ಮುಂದುವರಿಸುತ್ತೇವೆ. ಶ್ರೀ ಪಿ. ರಾಂದೇವ್ ಅವರು ಹೇಳಿದಂಥ ಅಭಿಪ್ರಾಯಕ್ಕೆ ಮನ್ನಣೆ ಕೊಡುತ್ತೇವೆ. ಆದರೆ ಸರ್ಕಾರದ ಈ ಕೆಟ್ಟ ಧೋರಣೆ ಹಾಗೂ, ಕೆಟ್ಟ ನಿಲುವನ್ನು ನಾವು ವಿರೋಧ ಮಾಡಿ ನಮ್ಮ ಪಕ್ಷದವರೆಲ್ಲರೂ ಸಭಾತ್ಯಾಗ ಮಾಡುತ್ತಿದ್ದೇವೆ.

ಶ್ರೀ ಆರ್. ಎಲ್. ಜಾಲಪ್ಪ.—ಹೋಗುವವರು ಖಾಯಂ ಆಗಿ ಹೋದರೆ ಈ ಸಭೆಯ ಕಾರ್ಯಕಲಾಪಗಳಿಗೆ ಅನುಕೂಲವಾಗುತ್ತದೆ. ಹಾಗೂ ಈ ರಾಜ್ಯಕ್ಕೆ ಸೇವೆ ಸಲ್ಲಿಸಿದಂತಾಗುತ್ತದೆ.

ಶ್ರೀ ಎಂ. ರಾಮಪ್ಪ.—ಈ ಮಾತನ್ನು ಹೇಳಲು ನಿಮಗೇನು ಅಧಿಕಾರ ಇದೆ?

(ಗೊಂದಲ)

(ಕ್ರಾಂತಿರಂಗದ ಸದಸ್ಯರುಗಳು ಮತ್ತು ಪಕ್ಷೇತರ ಸದಸ್ಯರಾದ ಶ್ರೀ ಜಿ. ನಾರಾಯಣ ಕುಮಾರ್ ಅವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಈಗ ಪ್ರಶ್ನೋತ್ತರಗಳು. ಮೊದಲಿನ ಮೂರು ಪ್ರಶ್ನೆಗಳನ್ನು ಅನಂತರ ತೆಗೆದುಕೊಳ್ಳುತ್ತೇನೆ. ಈಗ ೪೫ನೇ ಪ್ರಶ್ನೆಯನ್ನು ಶ್ರೀ ವಿ. ರುಕ್ಮಯ್ಯ ಪೂಜಾರಿ ಅವರು ಕೇಳಬಹುದು.